ಅದು ನಾನೇ. ಮತ್ತ್ಯಾಕೆ ಮೂರನೆಯವರದೆಂಬಂತೆ ಹೇಳುವುದು ಎನ್ನುವಿರಾ? ಅದು ಅರ್ಧ ಶತಮಾನವೇ ಸರಿದುಹೋದ ಕಾಲದ ಸಂಗತಿ. ನೋಡಿ, ನಾನು ವೃತ್ತಿಗೆ ಪದಾರ್ಪಣೆ ಮಾಡಿ ಐವತ್ತು ವರ್ಷಗಳಾದವು.

ನಾಲ್ಕು ದಶಕಗಳ ಸೇವಾವಧಿ ಮುಗಿಸಿ ನಿವೃತ್ತಳಾಗಿಯೇ ದಶಕದ ಮೇಲಾಯಿತು. ಆಗ 'ನಾನು' 'ನನ್ನದು' 'ಇದೇ ಶಾಶ್ವತ' ಎಂದೆನ್ನಿಸುತ್ತಾ ಸಂಭ್ರಮಿಸುತ್ತಿದ್ದ 'ಆ' ಕಾಲವು ತನ್ನ ಸುದೀರ್ಘ ಹರಿವಿನ ಪಯಣದಲ್ಲಿ 'ಇಂದು' ನಾನಿರುವ ಕಾಲ, ಸನ್ನಿವೇಶಗಳ ನಡುವೆ ಒಂದು ಸುದೀರ್ಘ ಸೇತುವೆಯನ್ನೇ ನಿರ್ಮಿಸಿಬಿಟ್ಟಿದೆ. ಅಂದಿನ ನನ್ನನ್ನೇ ನಾ ನೋಡುವ ಒಳನೋಟವು ಮಮಕಾರದ ಆರ್ದ್ರತೆಯಿಂದ ಮುದ್ದೆಯಾಗಿ ಮುಗ್ಗುಲಾದ ಕಾಳುಗಳನ್ನು ಬದಿಗೊತ್ತಿ ಹದನಾದ ಬಿಡಿಗಾಳುಗಳನ್ನು ತೋರಿಸುತ್ತಿದೆ ಎನಿಸಿದ್ದರಿಂದ ಈ ಒಳಗಣ್ಣೋಟದ ಚಿತ್ತಾರವನ್ನು ಮಂದಹಾಸದಿಂದ ನೋಡಲಾಗುತ್ತಿದೆ. ಹೀಗಾಗಿ ನನ್ನ ಅಧ್ಯಾಪಕ ವೃತ್ತಿಯ ಸಿಂಹಾವಲೋಕನ ಮಾಡಹೊರಟಾಗ ನನ್ನ ಬಗ್ಗೆ ನಾನೇ ನಿರ್ಲಿಪ್ತವಾಗಿ ನೋಡಲಾಗುತ್ತಿದೆ ಎನಿಸಿದ್ದರಿಂದ ಮೂರನೆಯವರ ಕುರಿತಂತೆ ಪ್ರಾರಂಭಿಸಿದೆ, ಅಷ್ಟೇ.

ಎಪ್ಪತ್ತರ ದಶಕದ ಆರಂಭದ ಆ ಕಾಲದಲ್ಲಿ ಅಧ್ಯಾಪಕರಿಗೆ ಸಮಾಜದಲ್ಲಿ ಗೌರವದ ಸ್ಥಾನಮಾನ ಇತ್ತು. ಪೋಷಕರು ಮಗುವಿನ ಮೊದಲ ಶಿಕ್ಷಕರಾದರೆ, ಶಿಕ್ಷಕರು ಮಗುವಿನ ಎರಡನೇ ಪೋಷಕರು ಎಂಬಂತಹ ವಿಶ್ವಾಸವಿತ್ತು. ಶಿಕ್ಷಕರ ವ್ಯಕ್ತಿತ್ವದ ಹಿರಿಮೆ ಅವರ ಶಾಲೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ವೃತ್ತಿ ನಿರ್ವಹಿಸುತ್ತಿದ್ದ ಊರಿಗೂ ವ್ಯಾಪಿಸಿರುತ್ತಿತ್ತು. ತಮ್ಮ ಮಕ್ಕಳನ್ನು ರೂಪಿಸುವ, ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ, ಸಾಂಸ್ಕೃತಿಕತೆಯ ಒಂದಾದರೂ ಕೌಶಲ ಹೊಂದಿರುವ, ಊರ ಹಿತಚಿಂತನೆಯ ಅಧ್ಯಾಪಕರು ಊರವರಿಗೆಲ್ಲ ಬಿಕ್ಕಟ್ಟಿನ ಸಂದರ್ಭದಲ್ಲಿ ಬೇಕಾದವರು ಎಂದು ಅಧ್ಯಾಪಕರನ್ನು ಊರವರ ಗೌರವಾನ್ವಿತ ಹಿರಿಯ ಗೆಳೆಯರಂತೆ ಪರಿಗಣಿಸುತ್ತಿದ್ದ ಕಾಲವಾಗಿತ್ತದು. ಎಲ್ಲೆಂದರಲ್ಲಿ ಖಾಸಗಿ ಶಾಲೆಗಳು ಇನ್ನೂ ತಲೆಯೆತ್ತಿರದ ಕಾಲವದು.

ಮಕ್ಕಳಿಗೆ ಪಾಠ ಮಾಡಬೇಕೆಂಬ ಉತ್ಸುಕತೆಯಲ್ಲಿದ್ದ ನನಗೆ ಆದೇಶ ಕೈಸೇರಿದಾಗ ಕೊಂಚ ನಿರಾಶೆಯಾಗಿತ್ತು. ಕಾರಣ ನನ್ನನ್ನು 'ಪದವೀಧರ ಮುಖ್ಯೋಪಾಧ್ಯಾಯಿನಿ' ಎಂದು ನೇಮಿಸಲಾಗಿತ್ತು. ಅಂದರೆ ಪಾಠದೊಂದಿಗೆ ಶಾಲಾಡಳಿತಕ್ಕೂ ಹೆಗಲು ಕೊಡಬೇಕಿತ್ತು. ನಮ್ಮೂರು ಚಿಕ್ಕಮಗಳೂರು ಜಿಲ್ಲೆ ಕಮ್ಮರಡಿಯಿಂದ ಒಂಬತ್ತು ಕಿ.ಮೀ. ದೂರದ ಭಂಡಿಗಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯೋಪಾಧ್ಯಾಯಿನಿಯಾಗಿ ವೃತ್ತಿ ಜೀವನ ಪ್ರವೇಶಿಸಿದೆ. ಇದರಿಂದಾಗಿ ಶಾಲೆಯ ಹೆಸರಿನಲ್ಲಿ 'ಮಾದರಿ' ಪದ ಸೇರಿಕೊಂಡಿತು. ಒಂದರಿಂದ ಏಳನೇ ತರಗತಿಯವರೆಗೆ ಇದ್ದ ಆ ಶಾಲೆಯಲ್ಲಿ ನಾಲ್ಕುನೂರರವರೆಗಿನ ಸಂಖ್ಯೆಯ ಮಕ್ಕಳಿದ್ದರೆ, ಏಳು ಮಂದಿ ಅಧ್ಯಾಪಕರಿದ್ದರು. ಊರ ಮಧ್ಯದಲ್ಲಿತ್ತು ಶಾಲಾ ಕಟ್ಟಡ.

ನಾನು ವೃತ್ತಿಗೆ ಸೇರಿದ ಆ ದಿನ ಒಳ್ಳೆಯ ದಿನವಲ್ಲ ಎಂದೂ, ಆ ಊರಲ್ಲಿ ಮುಸ್ಲಿಮರ ಸಂಖ್ಯೆ ವಿಶೇಷವಾಗಿರುವುದರಿಂದ ನನ್ನನ್ನು ಅಲ್ಲಿಗೆ ಕೆಲಸಕ್ಕೆ ಕಳಿಸಬಾರದೆಂದೂ ಹಿತ ನುಡಿದವರ ಮಾತುಗಳಿಗೆ ತಂದೆಯದು ದಿವ್ಯ ನಿರ್ಲಕ್ಷ್ಯ. ದಿನ ವಾರ ಗಳಿಗೆ ಮುಹೂರ್ತ ಏನೂ ಮಾಡವು, ಮನಸ್ಸಿದ್ದಲ್ಲಿ ಮಹಾದೇವ, ಆ ಊರಲ್ಲೂ ನನಗೆ ಗುಂಡೂ ಸಾಬರೆಂಬ ಆತ್ಮೀಯರಲ್ಲದೆ, ಇನ್ನೂ ಕೆಲವರು ಮುಸ್ಲಿಮರ ಕುರಿತು ಒಳ್ಳೆಯ ಮಾತುಗಳನ್ನೇ ಕೇಳಿದ್ದೇನೆ, ನೀನು ಧೈರ್ಯವಾಗಿ ಸೇರಿಕೋ ಎಂದರು. ದೃಢಮನ, ಗುರಿಯೆಡೆಗೆ ಗಮನವಿದ್ದಲ್ಲಿ ಅಡೆತಡೆಗಳೇನೂ ಮಾಡವು ಎಂಬುದಾಗಿ ಅಮ್ಮನ ಅಭಯ. ಹಿಂದೆ ಅಧ್ಯಾಪಕರಾಗಿದ್ದ ಅಪ್ಪ ಸ್ವತಃ ತಾವು, ಬಂಧುಗಳಲ್ಲಿ ಒಂದಿಬ್ಬರು ಅಧ್ಯಾಪಕರು, ನಮ್ಮೂರ ಶಾಲೆಯ ಒಂದಿಬ್ಬರು ಮೇಷ್ಟ್ರುಗಳನ್ನೂ ಕೋರಿ ನನಗೆ ಸ್ವಲ್ಪ ವೃತ್ತಿ ಮಾರ್ಗದರ್ಶನ ಮಾಡಿಸಿದರು.

ನನಗೆ ಚಾರ್ಜ್ ವಹಿಸಿಕೊಡಬೇಕಿದ್ದ ರೇಮಪ್ಪ ಮೇಷ್ಟ್ರು 'ಹೆಡ್ಮೇಷ್ಟ್ರು' ಎಂದು ಮಕ್ಕಳಿಂದಲೂ ಊರವರಿಂದಲೂ ಪ್ರೀತ್ಯಭಿಮಾನಗಳಿಂದ ಕರೆಸಿಕೊಂಡಿದ್ದವರು. ಇನ್ನು ಮುಂದೆ ಅವರು ಅಲ್ಲೇ ಸಹಶಿಕ್ಷಕರಾಗಿ ಮುಂದುವರಿಯಬೇಕಿದ್ದ ಪರಿಸ್ಥಿತಿ. ವಸ್ತುಗಳು, ರಿಜಿಸ್ಟರ್‌ಗಳು, ಕೇರೇಡ್ (ಅಮೆರಿಕದ ಗೋಧಿ ಎಣ್ಣೆ) ಸ್ಟಾಕ್ ಎಂದು ಎಲ್ಲವನ್ನೂ ತೋರಿಸಿ ಅಧಿಕಾರ ಹಸ್ತಾಂತರಿಸುವ ದಿನವಿಡೀ ನಡೆದ ಪ್ರಕ್ರಿಯೆಯಲ್ಲಿ ಅತ್ಯಂತ ಗೌರವಾದರಗಳಿಂದಲೇ ವರ್ತಿಸಿ ಚಾರ್ಜ್ ವಹಿಸಿಕೊಟ್ಟಿದ್ದರು. ಅವರ ಪರಿಸ್ಥಿತಿಯ ಬಗ್ಗೆ ಸಹಾನುಭೂತಿಯಿಂದ ಪ್ರಜ್ಞಾಪೂರ್ವಕವಾಗಿ ವಿಶೇಷ ಗೌರವಾದರ ತೋರುತ್ತಿದ್ದೆ. ಕ್ರಮೇಣ ತಮ್ಮ ಮನಸ್ಸನ್ನು ತಹಬಂದಿಗೆ ತಂದುಕೊಂಡ ಅವರು ನನ್ನನ್ನು ತಮ್ಮ ಕಿರಿಯ ತಂಗಿಯೆಂಬಂತೆ ಪರಿಗಣಿಸಿ ಮುಕ್ತ ಮನದ ಸಹಕಾರ ನೀಡಿದ್ದರು. ಇನ್ನುಳಿದ ಶಿಕ್ಷಕರಲ್ಲಿ ದೇವೀರಪ್ಪ ಮೇಷ್ಟ್ರು ಅನುಭವ ಶಿಸ್ತಿನಲ್ಲಿ ಮಾಗಿದ ವ್ಯಕ್ತಿತ್ವದವರು. ಇಂಗ್ಲಿಷ್ ಬೋಧನೆಯ ತರಬೇತಿ ಹೊಂದಿದ್ದು, ಪೇಬಿಲ್ ತಯಾರಿ, ಇಲಾಖಾ ನಿಯಮಾವಳಿಗಳ ಅರ್ಥೈಸುವಿಕೆಯಲ್ಲಿ ಕುಶಾಗ್ರಮತಿಯಾಗಿದ್ದವರು ಶಂಕರನಾರಾಯಣ ಮೇಷ್ಟ್ರು.




ನಂಜುಂಡಸ್ವಾಮಿ ಮೇಷ್ಟ್ರು, ರಮೇಶ ಮೇಷ್ಟ್ರು, ಚಂದ್ರಕಾಂತ ಮೇಷ್ಟ್ರು, ವಿಶ್ವೇಶ್ವರಪ್ಪ ಮೇಷ್ಟ್ರು ಇವರೆಲ್ಲ ಶ್ರದ್ಧಾವಂತ ಶಿಕ್ಷಕರು. ಗುಂಪಿಗೆ ಸೇರದ ಪದದಂತಿದ್ದವರೆಂದರೆ ಗೋವಿಂದಪ್ಪ ಮೇಷ್ಟ್ರು. ಕೆಂಗಣ್ಣಿನ ಅವರು ಹಿಡಿದು ಮುಟ್ಟಿದ್ದಕ್ಕೆಲ್ಲ ಸಿಡಾರೆಂದು ಸಿಡುಕುತ್ತಾ ಮಕ್ಕಳಿಗೆ ಕೋಲು ಹುಡಿಗುಟ್ಟಿಸುತ್ತಿದ್ದರು. ಇಂದಿನಂತೆ ಶಿಕ್ಷಕ ವೃತ್ತಿಗೆ ಪದಾರ್ಪಣೆ ಮಾಡುವಾಗಲೇ ಮಕ್ಕಳ ಹಕ್ಕುಗಳು, ಅವರ ಶಿಕ್ಷಣದ ಹಕ್ಕುಗಳು, ಮಕ್ಕಳ ಸಹಾಯವಾಣಿ ಹೀಗೆ ವಿವಿಧ ಕಾಯಿದೆ ಕಾನೂನುಗಳ ಕಟ್ಟೆಚ್ಚರದ ಅರಿವಿನಿಂದ ಮಕ್ಕಳಿಗೆ ಹೊಡೆಯುವುದಂತಿರಲಿ, 'ಬೈದು ಹೇಳಿದವ ಬದುಕಲು ಹೇಳಿದ' ಎಂಬಂತೆ ಬೈದು ಬುದ್ಧಿ ಹೇಳಲೂ ಹಿಂದೆಮುಂದೆ ನೋಡಬೇಕಿರುವ ಕಾಲ ಅದಾಗಿರಲಿಲ್ಲವಾದುದರಿಂದ ಇವರ ಆಟಾಟೋಪ ಹೇಗೋ ನಡೆಯುತ್ತಿತ್ತು.

ಶಾಲೆಯ ಮಕ್ಕಳು ಮಾತ್ರ ಒಂದೊಂದು ಮಗುವೂ ಪುಟಿಪುಟಿವ ಚೈತನ್ಯದ ಚಿಲುಮೆ. ಮುಗ್ಧತೆಯೇ ಮೈವೆತ್ತಿರುವ ಆ ಮಕ್ಕಳ ಒಡನಾಟ ನೀಡುತ್ತಿದ್ದ ಅನಿರ್ವಚನೀಯ ಆನಂದ ಸರಿಸಾಟಿಯಿಲ್ಲದ್ದು. ಮೊಟ್ಟಮೊದಲ ವೃತ್ತಿ ಜೀವನದ ಆ ಶಾಲೆಯ ಮಕ್ಕಳು ಹಸಿಗೋಡೆಯಲ್ಲಿ ಹರಳೊತ್ತಿದಂತೆ ಒಬ್ಬೊಬ್ಬರೂ, ಕೆಲವರಂತೂ ಇನ್ಶಿಯಲ್ಸ್, ಹಸ್ತಾಕ್ಷರದ ಸಮೇತ ಇಂದಿಗೂ ಮನದಲ್ಲಿ ನೆಲೆ ನಿಂತಿದ್ದಾರೆ.

ಆ ಶಾಲೆಯಲ್ಲಿ ನಾನು ಕೈಗೊಂಡಿದ್ದ ಮೊಟ್ಟಮೊದಲ ಕೆಲಸ ಎಂದರೆ, ಪ್ರಾರ್ಥನಾ ಗೀತೆ ಬದಲಿಸಿದ್ದು. 1973ರ ಆ ವರ್ಷ ರಾಜ್ಯವು 'ಕರ್ನಾಟಕ' ಎಂಬ ಅಭಿದಾನವನ್ನು ಹೊತ್ತು ಮೆರೆದ ವರ್ಷ. ಹಾಗಾಗಿ ಇಲ್ಲಿನ 'ಸ್ವಾಮಿ ದೇವನೆ ಲೋಕ ಪಾಲನೆ' ಗೀತೆಯ ಬದಲಿಗೆ 'ಜೈ ಭಾರತ ಜನನಿಯ ತನುಜಾತೆ' ಗೀತೆ ಕಲಿಸಬೇಕೆನ್ನಿಸುತ್ತಿದ್ದಂತೆಯೇ ತಕ್ಷಣ ಕಾರ್ಯಪ್ರವೃತ್ತಳಾಗಿದ್ದೆ. ನಾನು ಪೇಡ್ರಾಯಿಂಗ್ ಆಫೀಸರ್ ಕೂಡ ಆಗಿರಬೇಕಾದ್ದರಿಂದ ಇಂಗ್ಲಿಷ್‌ನಲ್ಲಿದ್ದ ನನ್ನ ಸಹಿ ನನಗೇ ಮುಜುಗರವೆನ್ನಿಸಿ ಅದನ್ನು ಕನ್ನಡಕ್ಕೆ ಬದಲಾಯಿಸುವ ಪ್ರಕ್ರಿಯೆ ಪೂರೈಸಿದೆ.

ವರ್ಷದ ಹಿಂದಷ್ಟೇ ಪದವಿ ಮುಗಿಸಿದ್ದವಳು ಪ್ರತಿಯೊಂದು ಕೆಲಸವನ್ನೂ ಕಲಿಯಬೇಕಿತ್ತು. ಆ ಊರಿಗೆ ಹೊಂದುವಂತೆ 'ಘೋಡಾ ಹೈ; ಮೈದಾನ್ ಹೈ' ಎಂದು ನನ್ನನ್ನೇ ನಾ ಸಂತೈಸಿಕೊಂಡಿದ್ದೆ. ಹಿರಿಯ ಶಿಕ್ಷಕರೆಲ್ಲರ ಮುಕ್ತ ಸಹಕಾರವಿತ್ತು. ಆದರೆ ಆ ಸ್ಥಾನದಲ್ಲಿದ್ದ ಮೇಲೆ ಕಲಿಯಲೇಬೇಕು ಎಂದು ವಿವಿಧ ರಿಜಿಸ್ಟರ್‌ಗಳನ್ನು ಬರೆಯುವುದು, ಪೇಬಿಲ್ ಮಾಡಿ ಟ್ರೆಷರಿಯಿಂದ ಸಂಬಳ ತಂದು ಬಟವಾಡೆ ಮಾಡುವುದನ್ನೆಲ್ಲ ನಿರ್ವಹಿಸಿದೆನಾದರೂ ಕೇರೇಡ್ ಲೆಕ್ಕ ಬರೆಯುವುದು ಮಾತ್ರ ಕೈಗೂಡಲಿಲ್ಲ. ಆದರೂ ಒಮ್ಮೆ ತಾಲ್ಲೂಕು ಕೇಂದ್ರ ಕೊಪ್ಪಾಗೆ ಹೋಗಿ ನಮ್ಮ ಶಾಲೆಯ ಕೋಟಾದ ಗೋಧಿರವೆ ಮೂಟೆಗಳು, ಪಾಮಾಯಿಲ್ ಡಬ್ಬಗಳನ್ನು ರಾತ್ರಿಯ ಬಸ್ಸಿಗೆ ಹಾಕಿಸಿಕೊಂಡು ಬಂದು ಶಾಲೆಯೆದುರು ಬಸ್ಸಿಂದ ಇಳಿಸಿ, ಶಾಲೆಯೊಳಗೆ ಸಾಗಿಸಿ ಬಾಗಿಲು ಹಾಕಿಸಿಯೇ ಬಸ್ ಹತ್ತಿ ಊರಿಗೆ ಬಂದಿದ್ದೆ. ಈ ಪರಿಶ್ರಮದ ಕೆಲಸ ಕೂಡ ಸಂದರ್ಭ ಬಂದಲ್ಲಿ ನನಗೆ ಮಾಡಲಾಗುತ್ತದೆ ಎಂಬ ಆತ್ಮವಿಶ್ವಾಸ ಮೈಗೂಡಿಸಿಕೊಳ್ಳುವುದು ಬೇಕಿತ್ತು ನನಗೆ. ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯೆಡೆಗೂ ಗಮನಹರಿಸಬೇಕಿತ್ತು.

ಸುತ್ತಮುತ್ತಲ ಹತ್ತಾರು ಊರುಗಳಿಂದ